ಇ) ಹಾಗಿಲ್ಲದಿದ್ದಲ್ಲಿ. 3000ಕ್ಕೂ ಹೆಚ್ಚಾಗಿ ಜನಸಂಖ್ಯೆ ಹೊಂದಿರುವ ಈ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಪರಿಶೀಲನೆಯಲ್ಲಿದೆ

ಆ) ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ಸಮಗ್ರ ಮಾಹಿತಿಯೊಂದಿಗೆ ಪ್ರಸ್ತಾವನೆ ಪಡೆದು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಇ) ಮೇಲಿನ (ಆ) ಉತ್ತರದಿಂದ ಉದ್ಭವಿಸುವುದಿಲ್ಲ.

865(945) ಶ್ರೀ ವಿಶ್ವನಾಥ ಹೆಚ್.ಎಂ. (ಸಕಲೇಶಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2005–06 ಮತ್ತು 2006–07ನೇ ಸಾಲಿನಲ್ಲಿ ಆಲೂರು ಸಕಲೇಶಪುರ ತಾಲ್ಲೂಕುಗಳಲ್ಲಿ ಆನೆ ಹಾವಳಿಯಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳೆಷ್ಟು ?

ಆ) ಗಾಯಗೊಂಡಂತಹ ಪ್ರಕರಣಗಳೆಷ್ಟು ? ಎಷ್ಟು ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ?

ಇ) ಪರಿಹಾರ ನೀಡದಿರುವ ಪ್ರಕರಣಗಳೆಷ್ಟು? ನೀಡದಿದ್ದರೆ ಕಾರಣಗಳೇನು?

ಈ) 2005–06 ಮತ್ತು 2006–07ನೇ ಸಾಲಿನಲ್ಲಿ ಎಷ್ಟು ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಲಾಗಿದೆ?

ಉ) ಈ ವ್ಯಾಪ್ತಿಯಲ್ಲಿ ಈಗ ನೆಲೆಸಿರುವ ಕಾಡಾನೆಗಳ ಸಂಖ್ಯೆ ಎಷ್ಟು?

ಊ) ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? ತೆಗೆದುಕೊಂಡಿದ್ದರೆ ಆ ಪ್ರಕ್ರಿಯೆ ಯಾವ ಹಂತದಲ್ಲಿದೆ (ವಿವರ ನೀಡುವುದು)?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹಾಸನ ಜಿಲ್ಲೆಯ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ 2005–06 ಮತ್ತು 2006–07ನೇ ಸಾಲಿನಲ್ಲಿ ಕಾಡಾನೆಗಳ ಹಾವಳಿಯಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳ ವಿವರ ಈ ಕೆಳಗಿನಂತಿದೆ.

ವರ್ಷ	ಮಾನವ ಪ್ರಾಣ ಹಾನಿ ಪ್ರಕರಣ ಸಂಖ್ಯೆ:	ವಿತರಿಸಿರುವ ಪರಿಹಾರ ಧನ
2005–06	1	1,00,000/–
2006–07	3	3,00,000/–
ಒಟ್ಟು	4	4,00,000/–

ಆ) ಹಾಸನ ಜಿಲ್ಲೆಯ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿಯಿಂದ ಗಾಯಗೊಂಡವರ ಪ್ರಕರಣಗಳ ವಿವರ ಈ ಕೆಳಗಿನಂತಿದೆ.

ವರ್ಷ	ಮಾನವ ಪ್ರಾಣ ಹಾನಿ ಪ್ರಕರಣ ಸಂಖ್ಯೆ:	ವಿತರಿಸಿರುವ ಪರಿಹಾರ ಧನ
2005–06	7	32,000/–
2006–07	1	2,000/–
ಒಟ್ಟು	8	34,000/–

ಇ) 2005–06 ಮತ್ತು 2006–07ನೇ ಸಂಬಂಧಪಟ್ಟಂತೆ ಪರಿಹಾರ ನೀಡದಿರುವ ಪ್ರಕರಣಗಳು ಇರುವುದಿಲ್ಲ.

ಈ) 2005–06ನೇ ಸಾಲಿನಲ್ಲಿ ಎರಡು ಮತ್ತು 2006–07ನೇ ಸಾಲಿನಲ್ಲಿ ಒಂದು, ಒಟ್ಟು ಮೂರು ಕಾಡಾನೆಗಳನ್ನು ಮೇಲಿನ ಪ್ರದೇಶಗಳ ವ್ಯಾಪ್ತಿಯಲ್ಲಿ ಹಿಡಿದಿದ್ದು ಎರಡನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಮೂರ್ಕಲ್ ಆನೆ ವಾಸ್ತವ್ಯಕ್ಕೂ ಹಾಗೂ ಒಂದನ್ನು ಭದ್ರಾ ವನ್ಯಧಾಮಕ್ಕೂ ಸ್ಥಳಾಂತರಿಸಲಾಗಿದೆ.

ಉ) ಹಾಸನ ಜಿಲ್ಲೆಯ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಸುಮಾರು 20 ರಿಂದ 30 ಕಾಡಾನೆಗಳನ್ನು ಗುರುತಿಸಲಾಗಿದ್ದು, ಅವುಗಳು ಪಕ್ಕದ ಕೊಡಗು ಜಿಲ್ಲೆಯಿಂದ ವಲಸೆ ಬಂದವುಗಳಾಗಿರುತ್ತವೆ.

ಊ) ಹಾಸನ ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟುವ ಸಲುವಾಗಿ ಈಗಾಗಲೇ ಎರಡು ತಂಟೆಕೋರ ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಲು ಆದೇಶ ನೀಡಿದ್ದು, ಅದರನ್ವಯ ಸಕಲೇಶಪುರ ತಾಲ್ಲೂಕಿನ ಯಸಳೂರು ವಲಯದ ಕೆರೊಡಿ ಎಂಬ ಸ್ಥಳದಲ್ಲಿ ಆನೆ ಕ್ಯಾಂಪ್ ಸ್ಥಾಪಿಸಿ ಸದರಿ ಎರಡು ಗುರುತಿಸಿದ ಕಾಡಾನೆಗಳನ್ನು ಹಿಡಿಯುವ ಸಲುವಾಗಿ ಇಲಾಖಾ ಆನೆಗಳನ್ನು ತರಲಾಗಿದೆ ಮತ್ತು ಕಾಡಾನೆಗಳನ್ನು ಹಿಡಿಯುವ ಕಾರ್ಯಾಚರಣೆ ಪ್ರಗತಿಯಲ್ಲಿರುತ್ತದೆ.

ಅಲ್ಲದೆ ಜಿಲ್ಲೆಯಲ್ಲಿ ಹಾವಳಿ ನಡೆಸುತ್ತಿರುವ ಸುಮಾರು 20 ರಿಂದ 30 ಕಾಡಾನೆಗಳನ್ನು ಶಾಶ್ವತವಾಗಿ ಸೆರೆಹಿಡಿದ್ದ ಬೇರೆಡೆಗೆ ಸ್ಥಳಾಂತರಿಸಲು ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಲು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮತಿ ಬಂದ ನಂತರ ತಕ್ಷಣವೇ ಕ್ರಮ ಕೈಗೊಳ್ಳಲಾಗುವುದು.

858(1037) ಶ್ರೀ ಶ್ರೀನಿವಾಸಗೌಡ ಕೆ. (ಕೋಲಾರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಇಟ್ಟಿಗೆ ಕಾರ್ಖಾನೆಗಳಿಗೆ ಸಬ್ಸಿಡಿ ಕೊಡುವ ಪದ್ಧತಿ ಜಾರಿಯಲ್ಲಿದೆಯೇ?